

# ರೇಷ್ಮೆ ಸೀರೆಗೆ ನೈಸರ್ಗಿಕ ಬಣ್ಣ

ವಿವಾ ಮೆಜೆಂಟ ರೇಷ್ಮೆ ಸೀರೆ

**ನೈಸರ್ಗಿಕ ಬಣ್ಣ ಬಳಸಿದ ರೇಷ್ಮೆ ಸೀರೆ ಪರಿಸರ ಸ್ನೇಹಿ. ಕೊಂಚ ದುಬಾರಿಯಾದರೂ ದೀರ್ಘ ಬಾಳಿಕೆ ಅಂತೂ ಗ್ಯಾರಂಟಿ. ಜಾನಪದ, ಸಾಂಪ್ರದಾಯಿಕ ಹಾಗೂ ಲಿನೊ ಮಾದರಿಯಲ್ಲಿ ರೇಷ್ಮೆ ಸೀರೆಗಳು ಈಗ ಲಭ್ಯ.**

■ **ಯು. ಅನಂತ್**

ವ್ಯಕ್ತಿ–ವ್ಯಕ್ತಿಯನ್ನು ಅವಲಂಬಿಸುವುದಕ್ಕಿಂತ ಜೀವನದಲ್ಲಿ ಪ್ರಕೃತಿಯನ್ನೇ ಹೆಚ್ಚು ಅವಲಂಬಿಸುತ್ತಾನೆ. ಪ್ರಕೃತಿ ಇಲ್ಲದೆ ನಾವಿಲ್ಲ. ಹೀಗಾಗಿ ನಮಗೆ ಪ್ರಕೃತಿಯೇ ಉಸಿರು, ನಿಸರ್ಗದ ಹಸುರೇ ಎಲ್ಲರಿಗೂ ಜೀವದ್ರವ್ಯ.

ಫ್ಯಾಷನ್‌ಗೂ ಪ್ರಕೃತಿಗೂ ಅನನ್ಯ ನಂಟಿದೆ. ಎಲೆ, ಕಾಯಿ, ಬೀಜ, ಬೇರು, ತೊಗಟೆ ಎಲ್ಲವನ್ನೂ ಔಷಧಿಗೆ ಮಾತ್ರವಲ್ಲದೆ ಬಟ್ಟೆಗೆ ಉಪಯೋಗಿಸುವ ಬಣ್ಣ ತಯಾರಿಸಲೂ ಬಳಸುತ್ತೇವೆ. 'ನ್ಯಾಚುರಲ್ ಡೈ' (ನೈಸರ್ಗಿಕ ಬಣ್ಣ) ತಯಾರಿಕೆಗೆ ಬಳಸುವುದೇ ಈ ಮರಗಿಡಗಳ ಎಸೆನ್ಸ್ ಅನ್ನು. ಫ್ಯಾಷನ್ ಉದ್ಯಮದಲ್ಲಿ ನೈಸರ್ಗಿಕ ಬಣ್ಣದ ಪಾತ್ರ ಬಹಳ ಮಹತ್ವದ್ದು.

ಮುಖ್ಯವಾಗಿ ರೇಷ್ಮೆ ಸೀರೆಗಳಿಗೆ ಬಳಸುವ ನೈಸರ್ಗಿಕ ಬಣ್ಣ ಉತ್ಪನ್ನದ ತಾಜಾತನ ಕಾಪಾಡಿಕೊಳ್ಳಲು ಸಹಕಾರಿ. ಇದನ್ನು ಧರಿಸಿದರೆ ಆರೋಗ್ಯಕ್ಕೂ ಒಳ್ಳೆಯದು. ಸಖತ್ ಲುಕ್ ಅನ್ನೂ ಕೊಡುತ್ತದೆ, ಬೇರೆ ಸೀರೆಗಳಿಗಿಂತ ವಿಭಿನ್ನವಾಗಿಯೂ ಕಾಣಬಹುದು. ಉಡುಪು ತಯಾರಿಕೆಯಲ್ಲಿ ನೈಸರ್ಗಿಕ ಬಣ್ಣ ಬಳಸುವ ಪ್ರಕ್ರಿಯೆ ಹಿಂದೆಯೂ ಇತ್ತು. ಇದೇ ಪ್ರಕ್ರಿಯೆ ಈಗಲೂ ಮುಂದುವರೆದಿದೆ. ಶರ್ಟ್, ಧೋತಿ, ಕೋಟ್‌ಗಳನ್ನು ತಯಾರಿಸುವಾಗಲೂ ಕೆಲವೊಂದು ಕಂಪನಿಗಳು ನೈಸರ್ಗಿಕ ಬಣ್ಣವನ್ನೇ ಬಳಸಿ ಉಡುಪು ಮಾರುಕಟ್ಟೆಗೆ ತಂದಿದ್ದಾರೆ. ಇದಕ್ಕೆ ಬೇಡಿಕೆಯೂ ಹೆಚ್ಚು. ದುಬಾರಿಯೂ ಹೌದು.

ಚೆನ್ನೈ ಮೂಲದ ಆರ್‌ಎಂಕೆವಿ ಸಿಲ್ಕ್ಸ್ ರೇಷ್ಮೆ ಸೀರೆಗಳನ್ನು ನೈಸರ್ಗಿಕ ಬಣ್ಣ ಬಳಸಿ ಹೆಣೆದಿದ್ದು, ಹೊಸ ಹೊಸ ಪ್ರಯೋಗಗಳನ್ನೂ ಮಾಡಿದೆ. ಮೂರು ಪ್ರಮುಖ ಧ್ಯೇಯಗಳೊಂದಿಗೆ ಅಪ್ಪಟ ರೇಷ್ಮೆ ಸೀರೆಗಳನ್ನು ನ್ಯಾಚುರಲ್ ಡೈ ಬಳಸಿ